Payment of Arrears of D. A. and Implementation of Recommendation of Tukol Commission

322. Sri M. S. KRISHNAN (Malleswaram).—

Will the Minister for Finance, Planning and Youth Welfare be pleased to state:—

(*a*) whether the Governmeut is aware that there has been continuous agitation by the N.G.O.'s of the State for the payment of arrears of D.A. in cash for bringing up D.A. to Central rates and for implementing the recommendations of the Tukol Pay Commission, etc,;

(*b*) if so, the action the Government has taken or is proposing to take to meet the legitimate demands of the N.G.O.'s and to alleviate their grievances?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) Orders have been issued for payment of Dearness Allowance in cash from 1st January 1969 (*Vide* G. O. No. FD 17 SRP (1) 69, dated 23rd January 1969). The amount due from 1st March 1968 to end of December 1968, is to be invested in Five Year Fixed Deposit Scheme and in National Savings Certificates.

Dearness Allowance, House Rent Allowance, City Compensatory Allowance have been already sanctioned by Government as per Government Order No. FD 20 SRP (1) 69 of 10th March 1969 as per recommendations made by the Pay Commission. The recommendation regarding cash allowance for minor ailments has not been accepted. The other recommendations of the Pay Commission are under consideration of Government.

Demands of N.G.O.'s and Implementation of Recommendations of Tukol Pay Commission

327. Sri P. VENKATAGIRIYAPPA (Kolar).—

Will the Minister for Finance, Planning and Youth Welfare be pleased to state :—

(*a*) whether the Government is aware that the discontentment is growing among the N.G.O.'s of the State due to the failure of Goverament to implement the Tukol Pay Commission Report in full;

(*b*) the number of representations received by the various N.G.O.'s Associations in this regard and the points raised in their representations;

(*c*) the ways and means thought of to mobilise the resources to meet the legitimate demands of the N.G.O.'s early?

Sri RAMAKRISHNA HEGDE (Minister for Finance, Planning and Youth Welfare).—

(*a*) Some representations from N.G.O.'s Association have been received.

(*b*) A large number of representations mostly, printed post-cards have been received.

The main points urged are :

1 Revision of Minimum basic wage and increments especially for Class IV Staff.

2 Creation of Joint Consultative Machinery.

3 Regularising services of Local Candidates.

4 Implementations of Pay Commission's recommendations with progressive modifications.

(*c*) This depends on additional resources being raised and can be considered with reference to the recommendations of the Fifth Finance Commission or possibility of additional taxation and retrenchment.

Sri D. B. KALMANKAR.—May I know after the submission of the Report of the Fifth Finance Commission, whether the Government has dropped the consideration of the remaining recommendations of the Tukol Commission as far as the N.G.O.'s are concerned ?

† Sri RAMAKRISHNA HEGDE.—Sir, we have not decided to drop the idea considering the Tukol Commission Report under the circumstances, it appears rather difficult to implement them.

ಶ್ರೀ ಎಂ. ಎಸ್. ಕೃಷ್ಣನ್.—(ಅ) ಪ್ರಶ್ನೆಗೆ ಉತ್ತರವಾಗಿ ವೇತನಾ ಆಯೋಗದವರ ಶಿಫಾರಸ್ಸುಗಳನ್ನು ಜಾರಿಗೆ ತರುವುದು ಸರ್ಕಾರದ ಗಮನದಲ್ಲಿದೆಯೆಂದು ಹೇಳಿದ್ದೀರಿ. ಇವತ್ತು ಬೆಳಗ್ಗೆ ಪತ್ರಿಕೆಗಳಲ್ಲಿ ವರದಿ ಮಾಡಿರುವ ಪ್ರಕಾರ ನಿಮ್ಮ ಕಾಂಗ್ರೆಸ್ಸಿನ ಶಾಸಕರು ವೇತನಾ ಆಯೋಗದವರ ಶಿಫಾರಸುಗಳನ್ನು ಜಾರಿಗೆ ತರುವುದನ್ನು ವಿರೋಧ ಮಾಡಿದ್ದಾರೆಂದು ತಿಳಿದು ಬಂದಿದೆ ಹೇಗೆ ?

Mr. SPEAKER.—What has happened in Party Meeting should not be referred to here. Irrespective of what has happened in the Party, the hon. Member may put the question independently. Reference to Party proceedings is not permitted here.

ಶ್ರೀ ಎಂ. ಎಸ್. ಕೃಷ್ಣನ್.—ಆ ಒಂದು ನಿರ್ಣಯದಿಂದ, ತಾವು ಏನು "ಕನ್ಸಿಡರೇಶನ್ ಆಫ್ ದಿ ಗವರ್ನ್‌ಮೆಂಟ್" ಎಂದು ಹೇಳಿದ್ದಿರಿ. ಅದನ್ನು ಬಿಟ್ಟು ಬಿಡುತ್ತೀರೋ ? ಹಾಗೆ ಬಿಟ್ಟುಬಿಟ್ಟರೆ, ತಮ್ಮನ್ನು ಮಜನಭ್ರಷ್ಟರು, ತಾವು ಏನು ಅಶೂರೆನ್ಸ್ ಕೊಟ್ಟಿದ್ದೀರಿ, ಅದನ್ನು ಪಾಲನೆ ಮಾಡಿಲ್ಲ ಎಂದು ಹೇಳಿದಂತಾಗುವುದಿಲ್ಲವೇ ? ತಾವು ಪ್ರೇಕಪಿಶನ್ ಮಾಡುವಾಗ ಏನು ಹೇಳಿದ್ದೀರೋ, ಅದಕ್ಕೆ ತಪ್ಪಿದಂತಾಗುವುದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕಾಂಗ್ರೆಸ್ ಪಕ್ಷದಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ, ಆ ತೀರ್ಮಾನವನ್ನು ಸರ್ಕಾರ ಜಾರಿಯಲ್ಲಿ ತರುತ್ತದೆ. ಆದರೆ ಬಗ್ಗೆ ನನಗೆ ಏನೂ ನಾಚಿಕೆ ಇಲ್ಲ.

(*Interruptions*)

Mr. SPEAKER.—If the hon. Members want to put supplementaries, let them put after he completes his reply to a particular question. When the Hon. Minister is replying, it is against parliamentary procedure to interrupt him like this.

Sri RAMAKRISHNA HEGDE.—I beg to state that in parliamentary democracy, ultimately the Party that runs the Government decides policy matters. It is not new. We are not in a Communist regime.

(Interruptions)

Mr. SPEAKER.—When a question is asked, the Minister will reply. If in the light of that reply, any questions are raised, they may be permitted. As I have already stated, it is not proper to interrupt when the Hon. Minister is replying; It is against parliamentary procedure. If any hon. Members are not satisfied with the reply, there are other ways of ventilating their grievances. But this is not the time for that.

Sri V. N. PATIL.—Can he Comment on the communist Party ?

Mr. SPEAKER.—I will not allow this controversy.

ಶ್ರೀ ರಾಮಕೃಷ್ಣ ಹೆಗಡೆ.—ಪತ್ರಿಕೆಯಲ್ಲಿ ಏನು ಸಮಾಚಾರ ಬಂದಿದೆ ಅದರ ಬಗ್ಗೆ ನಾನು ಏನು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಾರ್ಲಮೆಂಟರಿ ಡೆಮೊಕ್ರೆಸಿಯಲ್ಲಿ ಯಾವುದೇ ಪಕ್ಷ ಆಡಳಿತ ನಡೆಸುತ್ತಿದ್ದರೂ ಯಾವುದೇ ವಿಚಾರ ವಾಗಿ, ಸರ್ಕಾರ ಕ್ರಮವನ್ನು ಕೈಗೊಳ್ಳುವ ಮೊದಲು ಆದು ಪಕ್ಷದಲ್ಲಿ ನಿರ್ಧಾರ ಮಾಡಬೇಕು. ಆದು ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರಲಿ, ಅಥವಾ ಕಮ್ಯುನಿಸ್ಟ್ ಪಕ್ಷವೇ ಅಧಿಕಾರದಲ್ಲಿರಲಿ, ಅದಕ್ಕೆ ಪಾರ್ಲಮೆಂಟರಿ ಡೆಮೋಕ್ರೆಸಿ ಎಂದು ಹೇಳುತ್ತಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟರ ಮಟ್ಟಿಗೆ ಇದೆ, ತುಕೋಳ್ ಆಯೋಗದ ವರದಿಯನ್ನು, ತುಕೋಳ್ ಆಯೋಗದ ಶಿಫಾರಸ್ಸುಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೇಗೆ ಎಂಬುದನ್ನು ಯೋಚಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ತುಕೋಳ್ ಕಮಿಷನ್ನಿನ ವರದಿ ಸರ್ಕಾರಕ್ಕೆ ಬಂದು ಅನೇಕ ತಿಂಗಳು ಆದರೂ ಕೂಡ ಆದನ್ನು ಕಾರ್ಯಗತ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರವ ನೀತಿ ಏನು, ಯಾವಾಗ ಈ ವರದಿಯನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕಾರಣದಿಂದ ತುಕೋಳ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದಕ್ಕೆ ತಡವಾಗಿದೆ, ತೊಂದರೆಯಾಗಿದೆ ಎಂದು ನಾನು ಅನೇಕ ಸಲ ಹೇಳಿದ್ದೇನೆ. 5ನೇ ಫೈನಾನ್ಸ್ ಕಮಿಷನ್ನಿನ ಮುಂದೆ ನಮ್ಮ ಕೇಸನ್ನು ಇಟ್ಟಿದ್ದೆವು. ಅವರು ಮೊನ್ನೆತಾನೆ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಆದರಿಂದ ನಮಗೆ ಅತ್ಯಂತ ಅನಾನುಕೂಲ ವಾದ ಒಂದು ಅವಾರ್ಡ್ ಆಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರ ಹತ್ತಿರ ಪ್ರತಿಭಟನೆ ಮಾಡಿ ವಾಗ್ವಾದ ಮಾಡಿ ಎಷ್ಟರಮಟ್ಟಿಗೆ ಆದರಿಂದ ಪರಿಹಾರ ಸಿಕ್ಕುತ್ತದೆ ಎಂಬುದನ್ನು ನೋಡಿಕೊಂಡು ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆವರೆ ಈಗ ಈ ಬಗ್ಗೆ ಆಶ್ವಾಸನೆ ಕೊಡುವುದು ಸಾಧ್ಯವಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ನಾನಗೆಜೆಟೆಡ್ ನೌಕರರ ಬೇಡಿಕೆಗಳ ಮುಖ್ಯಾಂಶಗಳು (1) ಕನಿಷ್ಠ ಮೂಲವೇತನವನ್ನು ಮತ್ತು ವಾರ್ಷಿಕ ಹೆಚ್ಚುವರಿಯನ್ನು ಅದರಲ್ಲೂ ವಿಶೇಷವಾಗಿ 4ನೇ ದರ್ಜೆಯ ಸಿಬ್ಬಂದಿಯವರ ಮೂಲವೇತನ ಮತ್ತು ವಾರ್ಷಿಕ ಹೆಚ್ಚುವರಿಯನ್ನು ಪರಿಷ್ಕರಿಸುವುದು, (2) ಸಂಯುಕ್ತ ಸಮಾಲೋಚನಾ ಸಮಿತಿಯನ್ನು ರಚಿಸುವುದು, (3) ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಕ್ರಮಬದ್ಧಗೊಳಿಸುವುದು (4) ವೇತನಾ

(ಶ್ರೀ ಪಿ. ವೆಂಕಟಗಿರಿಯಪ್ಪ)

ಅಯೋಗಾದವರ ಶಿಫಾರಸುಗಳನ್ನು ಪ್ರಗತಿಪರ ಮಾರ್ಪಾಟುಗಳೊಡನೆ ಕಾರ್ಯಗತಗೊಳಿಸುವುದು, ಎಂದು ಹೇಳಿದ್ದೀರಿ, ಈ ಬೇಡಿಕೆಗಳು ಸರಳವಾಗಿವೆ, ಮತ್ತು ನ್ಯಾಯಬದ್ಧವಾಗಿವೆ. ಇವುಗಳಲ್ಲಿ ಯಾವ ಬೇಡಿಕೆಗಳನ್ನು ಸರ್ಕಾರದವರು ಒಪ್ಪಿಕೊಳ್ಳುತ್ತೀರಿ, ಯಾವ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಕಷ್ಟ, ಆ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳನ್ನಾದರೂ ಒಪ್ಪಿಕೊಳ್ಳುತ್ತೀರಾ ದಯವಿಟ್ಟು ಖಚಿತವಾಗಿ ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ತುಕೋಳ್ ಅಯೋಗದವರು ಮಾಡಿರುವ ಶಿಫಾರಸ್ಸುಗಳಲ್ಲಿ ಕೆಲವೊಂದು ಮುಖ್ಯ ಶಿಫಾರಸ್ಸುಗಳನ್ನು ನಾವು ಅಂಗೀಕಾರ ಮಾಡಿದ್ದೇವೆ, ಅವುಗಳನ್ನು ಕಾರ್ಯಗತ ಮಾಡಿದ್ದೇವೆ. ಈಗ ನಾನ್ ಗೆಜಿಟೆಡ್ ನೌಕರರ ಸಂಘದವರು ಕೇಳಿರುವ ಬೇಡಿಕೆಗಳಲ್ಲಿ ಎರಡು ಮಹತ್ವವಾದ ಪ್ರಶ್ನೆಗಳು ಇವೆ. ಅದರಲ್ಲಿ ಮೊದಲನೆಯದು ಕೇಂದ್ರ ಸರ್ಕಾರದವರ ಸಂಬಳದ ಮಟ್ಟಕ್ಕೆ ನಮ್ಮ ಸಂಬಳವನ್ನು ಏರಿಸಬೇಕು ಎಂಬುದು. ಎರಡನೆಯದು, ತುಟ್ಟಿಭತ್ಯದ ಕೆಲವು ಅಂಶವನ್ನು ಬೇಸಿಕ್ ಪೇನಲ್ಲಿ ಮರ್ಜ್‌ಮಾಡಬೇಕು ಎಂಬುದು. ಈ ಎರಡು ಬೇಡಿಕೆಗಳನ್ನು ಪೂರೈಸಬೇಕಾದರೆ ಅವಕ್ಕೆ ಹೆಚ್ಚು ಹಣವನ್ನು ವಿನಿಯೋಗಿಸಬೇಕಾಗಿದೆ. ತುಕೋಳ್ ಅಯೋಗದವರು ಮಾಡಿರುವ ಉಳಿದ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಲು ಕ್ರಮವನ್ನು ತೆಗೆದುಕೊಳ್ಳಬೇಕಾದರೆ ನಮ್ಮ ಹಣಕಾಸಿನ ಪರಿಸ್ಥಿತಿ ತಕ್ಕಷ್ಟು ಸುಧಾರಿಸದ ಹೊರತು ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಖಂಡಿತವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತುಕೋಳ್ ಅಯೋಗದವರ ವರದಿ ಬಂದ ವೇಳೆ ಅದನ್ನು ಸರ್ಕಾರ ಕಾರ್ಯಗತ ಮಾಡಿದ್ದರೆ 5ನೇ ಆರ್ಥಿಕ ಅಯೋಗದವರು ಹೇಗೂ ಸರ್ಕಾರದವರು ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ ಎಂದು ಅದನ್ನು ಸೇರಿಸಿಕೊಂಡು ತಮಗೆ ಹಣವನ್ನು ಕೊಡುತ್ತಿದ್ದರು. ಆದ್ದರಿಂದ ಆರ್ಥಿಕ ಆಯೋಗದವರು ತಮಗೆ ಕಡಿಮೆ ಹಣವನ್ನು ಕೊಡುವುದಕ್ಕೆ ಇದೂ ಒಂದು ಕಾರಣವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಕಮಿಟ್ ಮಾಡಿಕೊಂಡಿರತಕ್ಕ ಎಕ್ಸ್‌ಪೆಂಡಿಚರನ್ನು ತೋರಿಸಿದ್ದೇವೆ. ಆದರಲ್ಲಿಯೂ ಸಂಪೂರ್ಣವಾಗಿ ಅದನ್ನು ಸ್ವೀಕಾರ ಮಾಡಿಲ್ಲವೆಂದು ಗೊತ್ತಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ನೌಕರರ ಸಂಬಳದ ಮಟ್ಟಕ್ಕೆ ರಾಜ್ಯ ಸರ್ಕಾರದ ನೌಕರರ ಸಂಬಳವನ್ನೂ ಹೆಚ್ಚು ಮಾಡಿದ್ದರೆ ಅದನ್ನು 5ನೇ ಆರ್ಥಿಕ ಆಯೋಗದವರು ಸ್ವೀಕಾರ ಮಾಡುತ್ತಿದ್ದರು ಎನ್ನುವುದು ಅಷ್ಟೊಂದು ಸರಿಯಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ತುಕೋಳ್ ಆಯೋಗವನ್ನು ನೇಮಕ ಮಾಡುವಾಗ ಸರ್ಕಾರದ ಹತ್ತಿರ ದುಡ್ಡಿದೆ, ಕೊಡಬಹುದು ಎಂಬ ಧೈರ್ಯದಿಂದ ನೇಮಕ ಮಾಡಿದಿರಾ ಮತ್ತು ಆಯೋಗದ ವರದಿ ಬಂದ ಮೇಲೆ ಸರ್ಕಾರದ ಹತ್ತಿರವಿದ್ದ ದುಡ್ಡು ಮಾಯವಾಯಿತೇ ಎಂಬುದನ್ನು ತಿಳಿಸಬೇಕು ? ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ಆಗದಿದ್ದರೆ ಇಷ್ಟೊಂದು ಹಣ ಖರ್ಚುಮಾಡಿ ಆಯೋಗವನ್ನು ನೇಮಕ ಮಾಡಬೇಕಾದರೆ ಪ್ರಯೋಜನವಾದರು ಏನಿತ್ತು ?

1-30 P.M.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ನೆನಪು ಇರಲಿಕ್ಕೆ ಇಲ್ಲವೆಂದು ಕಾಣುತ್ತದೆ. ತುಕೋಳ್ ಆಯೋಗವನ್ನು ಸರ್ಕಾರದವರೇ ನೇಮಕ ಮಾಡಿದ್ದು ಅಲ್ಲ, ಮತ್ತು ಆಗ ಸರ್ಕಾರದ ಹತ್ತಿರ ಸಾಕಷ್ಟು ಹಣ ಇತ್ತು ಎಂದು ಆಯೋಗವನ್ನು ಸರ್ಕಾರದವರೇ ನೇಮಕ ಮಾಡಿದ್ದು ಅಲ್ಲ. ಸರ್ಕಾರಿ ನೌಕರರು ಒಂದು ಆಯೋಗವನ್ನು ನೇಮಕ ಮಾಡಬೇಕೆಂದು ಪುನಃ ಪುನಃ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದರು. ಆ ಬೇಡಿಕೆಯನ್ನು ಈಡೇರಿಸುವುದಕ್ಕಾಗಿ ಆಯೋಗವನ್ನು ನೇಮಕ ಮಾಡಬೇಕಾಯಿತು. ತುಕೋಳ್ ಆಯೋಗವನ್ನು ನೇಮಕ ಮಾಡಿದಾಗ ಅವರು ಯಾವ ತರಹದ ಶಿಫಾರಸ್ಸನ್ನು ಮಾಡಬಹುದು, ಸರ್ಕಾರಕ್ಕೆ ಎಷ್ಟು ಖರ್ಚು ಬರಬಹುದು ಎಂಬುದನ್ನು ಕನಸಿನಲ್ಲಿಯೂ ಕೂಡ ತಿಳಿದುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ.

Sri SIDDIAH KASHIMATH.—May I know when and how the Tukol Commission report will be implemented by the Government ?

Sri RAMAKRISHNA HEGDE.—I can only answer the latter part of the question, *i.e.*, how can this Tukol Commission report be implemented It is simple. If the Government of India agrees to give the additional financial assistance that is required to implement this, I am prepared to implement it from today. But if you ask me from when, I have no answer to that.

ಶ್ರೀ ಎಂ. ನಾಗಪ್ಪ.—327ನೇ ಪ್ರಶ್ನೆಯಲ್ಲಿ (ಇ) ಪ್ರಶ್ನೆಗೆ ಉತ್ತರವಾಗಿ ಮೂರು ಕಾರಣಗಳನ್ನು ಕೊಟ್ಟು ಅದರ ಆಧಾರದಮೇಲೆ ಪರಿಶೀಲಿಸಬಹುದಾಗಿದೆ ಎಂದು ಹೇಳಿದ್ದಿರಿ. ಈಗಾಗಲೇ ಐದನೇ ವಿತ್ತೀಯ ಆಯೋಗದವರ ವರದಿ ಬಂದಿದೆ. ತೆರಿಗೆಯನ್ನು ಹೆಚ್ಚಿಸುವ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಿದ್ದೀರಿ, ಅದರ ವರದಿ ಯಾವಾಗ ಬರಬಹುದು ಮತ್ತು ನೌಕರರುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎರಡನೆಯದಾಗಿ ಈಗ ತಾವು ಪಾರ್ಟ್ ಗವರ್ನಮೆಂಟ್ ಈಗ ಇರುವುದರಿಂದ ಪಾರ್ಟಿಯ ಡಿಸಿಪ್ಲಿನ್ ಅನುಸರಿಸಬೇಕಾಗಿದೆ ಎಂದು ಹೇಳಿದಿರಿ. ತಮ್ಮ ಪಾರ್ಟಿಯವರು ಈ ಬಗ್ಗೆ ಏನು ಡೈರಕ್ಷನ್ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು ; ಮೂರನೆಯದಾಗಿ ನಿವೃತ್ತಿವೇತನ ಪಡೆಯುವವರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಮೊನ್ನೆತಾನೆ ಇಂದಿರಾಗಾಂಧಿಯವರು ಕೇಂದ್ರನರ್ಕಾರದ ನಿವೃತ್ತನೌಕರರಿಗೆ 10 ರೂಪಾಯಿಗಳಷ್ಟು ಸಂಬಳವನ್ನು ಹೆಚ್ಚು ಮಾಡಿದ್ದಾರೆ. ಅದೇ ಪ್ರಕಾರ ನಮ್ಮ ರಾಜ್ಯದ ನಿವೃತ್ತ ನೌಕರರಿಗೂ ಹೆಚ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದವರು ತಮ್ಮ ನಿವೃತ್ತ ನೌಕರರಿಗೆ 10 ರೂಪಾಯಿಗಳನ್ನು ಮೊನ್ನೆ ಹೆಚ್ಚಿಸಿರಬಹುದು. ಆದರೆ ನಾವು ಒಂದೂವರೆ ವರ್ಷದ ಹಿಂದೆಯೇ ಕೊಟ್ಟಿದ್ದೇವೆ. ಆದ್ದರಿಂದ ಕೇಂದ್ರನರ್ಕಾರದವರು ಏನೂ ದೊಡ್ಡ ಕಾರ್ಯಸಾಧನೆ ಮಾಡಿದಹಾಗೆ ಆಗಲಿಲ್ಲ. 5ನೇ ವಿತ್ತೀಯ ಆಯೋಗದವರ ವರದಿಯನ್ನು ನೋಡಬೇಕಾಗಿದೆ ಎಂದು ಹೇಳಿರುವುದು ನಿಜ. ಈಗ ಅವರ ವರದಿ ಬಂದಿದೆ. ಆ ಬಗ್ಗೆ ನೆನ್ನೆ ಇಲ್ಲಿ ಪ್ರಸ್ತಾಪಕೂಡ ಆಗಿದೆ. ರಿಸೋರ್ಸಸ್ ಅಂಡ್ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರು ತಮ್ಮ ವರದಿಯನ್ನು ಇನ್ನು ಎರಡು ತಿಂಗಳಲ್ಲಿ ಕೊಡಬಹುದೆಂದು ಆಶೆ ಮಾಡುತ್ತೇನೆ. ನಾನ್-ಗೆಜೆಟೆಡ್ ನೌಕರರಿಗೆ ಏನೂ ಮಾಡಲಿಲ್ಲವೆಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು. ತುಕೋಳ್ ಆಯೋಗವನ್ನು ನೇಮಕ ಮಾಡಿದಮೇಲೆ ಅವರು ಕೊಟ್ಟಂತಹ ಇಂಟೀರಮ್ ರಿಪೋರ್ಟ್‌ಗಳಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ತುಕೋಳ ಆಯೋಗವನ್ನು ನೇಮಕ ಮಾಡುವುದಕ್ಕೆ ಮೊದಲು ಕೂಡ ಅನೇಕ ಸಲಿ ತುಟ್ಟಿಭತ್ಯ ಹೆಚ್ಚು ಮಾಡಿದ್ದೇವೆ. ಅಲ್ಲದೆ ಮೊನ್ನೆತಾನೆ ಕೇಂದ್ರನರ್ಕಾರದ ನೌಕರರಿಗೆ ಸಿಗತಕ್ಕಂಥ ತುಟ್ಟಿಭತ್ಯದ ಮಟ್ಟದಲ್ಲಿ ನಮ್ಮ ನೌಕರರಿಗೂ ತುಟ್ಟಿಭತ್ಯ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಅಲ್ಲದೆ ಆಯೋಗದವರು ಸಿ.ಸಿ.ಎ. ಮತ್ತು ಎಚ್.ಆರ್.ಎ. ಬಗ್ಗೆ ಏನು ಶಿಫಾರಸ್ ಮಾಡಿದ್ದರೋ ಅದನ್ನು ಅಂಗೀಕರಿಸಿದ್ದೇವೆ. ಇದರ ಜೊತೆ ಏನೂ ಮಾಡಲಿಲ್ಲವೆಂದು ಆಗುವುದಿಲ್ಲ. ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅಷ್ಟನ್ನೂ ಮಾಡಿದ್ದೇವೆ. ಹಣದ ಅನುಕೂಲವಾದರೆ ಮತ್ತೆ ಹೆಚ್ಚು ಮಾಡುತ್ತೇವೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ತುಕೋಳ್ ಕಮಿಷನ್‌ರವರ ವರದಿಯನ್ನು ಸಂಪೂರ್ಣವಾಗಿ ಅಂಗೀಕಾರ ಮಾಡುತ್ತೀರಾ ಹೇಗೆ ? ತುಕೋಳ್ ಕಮಿಷನ್ನಿನವರು ಕೆಲವೊಂದು ಇಲಾಖೆಗಳನ್ನು ಹೆಚ್ಚು ಮಾಡಿರುವುದನ್ನು ತೆಗೆಯಬೇಕೆಂದು ಎಂದು ಹೇಳಿದ್ದಾರೆ. ಎಂದರೆ ಡಿವಿಜನಲ್ ಕಮಿಷನರ್ ಪೋಸ್ಟ್‌ಗಳನ್ನು ರದ್ದು ಮಾಡಬೇಕು ಹಾಗೂ ಇನ್ನೂ ಕೆಲವು ಪೋಸ್ಟ್‌ಗಳನ್ನು ಕಡಿಮೆ ಮಾಡಬಹುದು ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ ? ಮತ್ತು ಈಗ ಕೆಲವು ನಾಲ್ಕನೆ ದರ್ಜೆ ನೌಕರರನ್ನು, ಹಾಗೂ ರೋಕರ್ ಕ್ಯಾಂಡಿಡೇಟುಗಳಾಗಿರುವವರನ್ನು ರಿಟ್ರೆಂಚ್ ಮಾಡಬೇಕೆಂದು ಇರುವುದನ್ನು ರೆಗ್ಯುಲರೈಸ್ ಮಾಡುವ ಯಾವುದಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಇದರ ಬಗ್ಗೆ ಸರಕಾರದವರ ಅಭಿಪ್ರಾಯ ಹೇಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ತುಕೋಳ್ ಆಯೋಗದ ಸಂಪೂರ್ಣ ಶಿಫಾರಸುಗಳನ್ನು ನಾವು ಜಾರಿಗೆ ತಂದರೆ ನಾನು ಆಗಲೇ ಹೇಳಿದಹಾಗೆ ಸರಕಾರಕ್ಕೆ ವರ್ಷಕ್ಕೆ ಸುಮಾರು 22 ಕೋಟಿ ರೂಪಾಯಿಗಳಷ್ಟು ಹೆಚ್ಚು ಖರ್ಚು ಬರುತ್ತದೆ. ಇದರಲ್ಲಿ ಈಗಾಗಲೇ ಸರಕಾರ ಮೂರುವರೆ ಕೋಟಿಯಷ್ಟು ಖರ್ಚಿನ ಶಿಫಾರಸುಗಳನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಇನ್ನುಳಿದ ಕೆಲವು ಶಿಫಾರಸುಗಳಲ್ಲಿ ಅವರು ಹೇಳಿರುವುದು ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಓವರ್ ಸ್ಟಾಫ್ ಇದೆ. ಇದನ್ನು

(ಶ್ರೀ ರಾಮಕೃಷ್ಣ ಹೆಗಡೆ)

ಕಡಿಮೆ ಮಾಡಬಹುದು. ಮತ್ತು ಇದನ್ನು ಮಾಡಿದರೆ ಸುಮಾರು ಒಂದುಕೋಟಿ ರೂಪಾಯಿಗಳಷ್ಟು ಉಳಿತಾಯ ಮಾಡಬಹುದು. ಇನ್ನು ಕೆಲವು ಡಿಪಾರ್ಟ್‌ಮೆಂಟಿನಲ್ಲಿ ನೂರಕ್ಕೆ ಹತ್ತರಷ್ಟು ಪ್ರೊರೇಟಾದಲ್ಲೇಲೆ ರಿಟ್ರಿಂಚ್ ಮಾಡಬಹುದು. ಇದು ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವವರನ್ನು ರೆಗ್ಯುಲರೈಸು ಮಾಡಬೇಕಾಗುತ್ತದೆ ಎಂದು ಹೇಳಿದರೆ ಇರತಕ್ಕ ಪರ್ಮನೆಂಟು ನೌಕರರುಗಳನ್ನೇ ತೆಗೆದುಹಾಕುವ ಪ್ರಶ್ನೆ ಬಂದರೆ ಅದರಿಂದ ಬಹಳ ಜನಕ್ಕೆ ಅನ್ಯಾಯವಾಗುತ್ತದೆ ಮತ್ತು ಜನರಲ್ಲಿ ಒಂದು ರೀತಿಯಾದ ಕಳವಳಕ್ಕೆ ಅವಕಾಶವಾಗುತ್ತದೆ. ಇದನ್ನು ಮಾನ್ಯ ಸದಸ್ಯರೂ ಕೂಡ ವಿಚಾರ ಮಾಡಬೇಕು. ಇದನ್ನು ಕೆಲವೊಂದು ಇಲಾಖೆಗಳ ಮೂಲಕ ವರಮಾನವನ್ನು ಹೆಚ್ಚು ಮಾಡಿಕೊಳ್ಳ ಬಹುದು ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಇದರಿಂದ ಸುಮಾರು 3—4 ಕೋಟಿಯಷ್ಟು ವರಮಾನ ಬರಬಹುದು. ಲಕ್ಸುರಿ ಗುಡ್ಸ್‌ಮೇಲೆ ಈಗಿರುವ ಸೇಲ್ಸ್‌ಟ್ಯಾಕ್ಸ್ ಕಡಿಮೆ. ಇದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಿಕೊಳ್ಳಬಹುದು. ಈಗ ಇಲ್ಲಿ ಸೇಲ್ಸ್‌ಟ್ಯಾಕ್ಸ್‌ನ್ನು ಶೇಕಡಾ ಮೂರರಷ್ಟು ಎಂದು ಏರಿಸಿದರೆ ಮುಂದೆ ಇದರಿಂದ ಏನು ಪರಿಣಾಮವಾಗುತ್ತದೆ ಎಂದರೆ ಇಂದು ಇಲ್ಲಿ ಒಬ್ಬರು ಒಂದು ರೆಫ್ರಿಜರೇಟರನ್ನು ಖರೀದಿ ಮಾಡಿದರೆ ಬೆಲೆ ಹೆಚ್ಚು ಎಂದು ಬೊಂಬಾಯಿ ಅಥವಾ ಮದ್ರಾಸಿನಲ್ಲಿ ಕೊಂಡುಕೊಳ್ಳುತ್ತಾರೆ. ಏಕೆಂದರೆ ಅಲ್ಲಿ ಸೇಲ್ಸ್‌ಟ್ಯಾಕ್ಸ್ ದರ ಬಹಳ ಕಡಿಮೆ ಇದೆ. ಮತ್ತು ರೆವೆನ್ಯೂ ಸ್ವಾಂಪು ಈಗಿರುವ ಹತ್ತು ಪೈಸಾದಿಂದ ಹದಿನೈದು ಪೈಸಾದವರೆಗೆ ಹೆಚ್ಚು ಮಾಡಬಹುದು ಹಾಗೇ ಇನ್ನೂ ಕೆಲವು ಸೂಚನೆಗಳನ್ನು ಅವರು ತಮ್ಮ ವರದಿಯಲ್ಲಿ ಮಾಡಿದ್ದಾರೆ. ಮತ್ತೆ ಮದುವೆಗೆ ರಿಜಿಸ್ಟರು ಮಾಡುಮಾಗ ರಿಜಿಸ್ಟ್ರೇಷನ್ ಫೀ ಜಾಸ್ತಿ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಮದುವೆ ರಿಜಿಸ್ಟ್ರೇಷನ್‌ಗೆ ಫೀ ಹಾಕುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್ ಮದುವೆಯಾಗುವವರಿಗೆ ಫೀಸು ಜಾಸ್ತಿ ಮಾಡುವುದಿಲ್ಲ. ಅವರು ಮದುವೆ ಮಾಡಿಕೊಂಡಮೇಲೆ ಹಾಕಬಹುದು. (ನಗು). ಹೀಗೆ ಬಹಳ ಮಹತ್ವವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಇದರಿಂದ ಸುಮಾರು ಮೂರರಿಂದ ಐದುಕೋಟಿಯವರೆಗೆ ವರಮಾನ ಬರುತ್ತದೆ. ನಾನು ಆಗಲೇ ಹೇಳಿದ ಹಾಗೆ ಈ ಆಯೋಗದ ಸೂಚನೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾದರೆ ಒಂದು ವರ್ಷಕ್ಕೆ ಸುಮಾರು 22 ಕೋಟಿಯವರೆಗೆ ಖರ್ಚು ಬರುತ್ತದೆ. ಮಾನ್ಯ ಸದಸ್ಯರಲ್ಲಿ ಇನ್ನೂ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಸರಕಾರದ ನೌಕರರುಗಳು ನಮ್ಮ ಇಡಿ ಜನತೆಯ ಎಂದರೆ ಸುಮಾರು ಎರಡುಕೋಟಿ ಇರುವ ಜನಸಂಖ್ಯೆಯಲ್ಲಿ ಶೇಕಡಾ ಒಂದರಷ್ಟು ಎಂದರೆ ಕೇವಲ ಎರಡು ಲಕ್ಷ ಜನರಿದ್ದಾರೆ. ಇದರಲ್ಲಿ ಏಡೇಡ್ ಇನ್‌ಸ್ಟಿಟ್ಯೂಷನ್‌ಗಳೂ ಸೇರುತ್ತವೆ. ಎರಡು ಲಕ್ಷ ಇರುವ ನೌಕರರುಗಳಿಗಾಗಿ ಎಷ್ಟು ಪರ್ಸೆಂಟು ಖರ್ಚು ಬರುತ್ತಿದೆ ಎಂದರೆ ಈಗಾಗಲೇ ಶೇಕಡ 46 ಪರ್ಸೆಂಟು ಇದೆ. ಮುಂದೆ ಇನ್ನೂ 22 ಕೋಟಿಯಷ್ಟು ಖರ್ಚು ಮಾಡುವುದಾದರೆ ತುಕೋಳ್ ಆಯೋಗದಂತೆ ಇರುವ ನೌಕರರುಗಳಿಗಾಗಿ ಖರ್ಚು ಸುಮಾರು ಶೇಕಡಾ 52ರಷ್ಟು ಬರುತ್ತದೆ. ಇದನ್ನು ಮಾಡಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡಬೇಕು. ಸರಕಾರದ ನೌಕರರುಗಳ ಬಗ್ಗೆ ಇವೆಲ್ಲ ವಿಚಾರ ಗಳನ್ನು ವಿಚಾರ ಮಾಡಲಿಕ್ಕೆ ಸರಕಾರಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಬೋಳ ರಘುರಾಮ ಶೆಟ್ಟಿ.—ಸ್ವಾಮಿ, 1968ನೇ ಏಪ್ರಿಲ್‌ನಿಂದ ನಾನ್-ಗೆಜೆಟೆಡ್ ನೌಕರರಿಗೆ ಡಿಯರ್‌ನೆಸ್ ಅಲೋಯನ್ಸ್ ಜಾಸ್ತಿ ಮಾಡಿದ್ದೀರಿ. ಆದರೆ ನೀವು ಕೊಟ್ಟಂಥ ಡಿಯರ್‌ನೆಸ್ ಅಲೋಯನ್ಸ್‌ನ್ನು 1968ನೇ ಏಪ್ರಿಲ್‌ನಿಂದ 1968ನೇ ಡಿಸೆಂಬರ್‌ರವರೆಗೆ ಏಕಾಏಕಿ ಫಿಕ್ಸ್‌ಡ್ ಡಿಪಾಸಿಟ್ ಇಟ್ಟಿದ್ದು ಅನ್ಯಾಯವಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ವರ್ಷದ ಪರಿಸ್ಥಿತಿ ಹಾಗೆ ಬಂತು. ಮತ್ತೆ ಅದನ್ನು ಮಧ್ಯದಲ್ಲಿ ಕೊಡತಕ್ಕಂಥ ಪರಿಸ್ಥಿತಿ ಬಂತು. ಆಗ ಓವರ್‌ಡ್ರಾಫ್ಟ್ ಇದ್ದಿದ್ದುದರಿಂದ ಅವರಿಗೆಲ್ಲರಿಗೂ ಕೆಲವು ಭಾಗವನ್ನು 1968ರ ಏಪ್ರಿಲ್‌ನಿಂದ ಡಿಸೆಂಬರ್‌ರವರಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ರೂಪದಲ್ಲಿ ಕೊಟ್ಟಿದ್ದೇವೆ. 1969ನೇ ಜನವರಿಯಿಂದ ಕ್ಯಾಷ್ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಉತ್ತರದಲ್ಲಿ ತಾವು ಅಡಳಿತ ಪಕ್ಷದ ಆದೇಶದಂತೆ ಅಡಳಿತ ನಡೆಯುತ್ತದೆ ಎಂದು ಈಗತಾನೇ ತಿಳಿಸಿದಿರಿ. ತಮ್ಮ ಅಡಳಿತ ಪಕ್ಷ ಈ ತುಕೋಳ್ ವರದಿಯ ಬಗ್ಗೆ ಏನು ತೀರ್ಮಾನ ಮಾಡಬೇಕು ಎನ್ನುವ ಆದೇಶ ಏನಾದರೂ ಕೊಟ್ಟಿದೆಯೇ ? ಅಥವಾ ಕೊಟ್ಟಿಲ್ಲವೇ, ಈ ಬಗ್ಗೆ ಚರ್ಚೆ ನಡೆದಿಲ್ಲವೇ ? ಎರಡನೆಯದಾಗಿ ಮುಂದಿನ ಬಜೆಟ್ ಸೆಷನ್ ಹೊತ್ತಿಗೆ ನನ್ನ ಮದುವೆ ಬರುತ್ತದೆ ಅಲ್ಲಿಯವರೆಗೆ ತೆರಿಗೆ ಹಾಕುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆಗೆ ಕಾಂಗ್ರೆಸ್ ಪಕ್ಷ ಸರ್ಕಾರಕ್ಕೆ ಏನು ಆದೇಶ ಕೊಟ್ಟಿದೆ ಎಂದು ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಗೆ ಬರೆದು ತಿಳಿದುಕೊಳ್ಳಬಹುದು. ಅವರು ಕೇಳಿದ ವಿಚಾರ ಈ ಪ್ರಶ್ನೆಗೆ ಸಂಬಂಧಪಟ್ಟಿದ್ದಲ್ಲ. ಎರಡನೇ ಪ್ರಶ್ನೆಗೆ ಉತ್ತರ ಹೇಳಬೇಕಾದ ಅಗತ್ಯ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, ಈ ತುಕೋಳ್ ವೇತನ ಆಯೋಗ ಬೇಕಾದಂಥ ಹೆಚ್ಚಿನ ಹಣ ಯಾವರೀತಿ ಸಂಗ್ರಹಿಸಬೇಕು ಎನ್ನುವುದನ್ನು ಶಿಫಾರಸು ಮಾಡಿದ್ದಾರೆ. ಹೆಚ್ಚಿನ ತೆರಿಗೆ ಹಾಕುವುದಾಗಲಿ ಅಥವಾ ನಿಕರನ್ನು ಕಡಿಮೆ ಮಾಡುವುದಾಗಲಿ ಅಥವಾ ವಿತ್ತೀಯ ಆಯೋಗದಂತೆ ಹೆಚ್ಚಿನ ಹಣ ದೊರೆತರೆ ಇದನ್ನು ಜಾರಿಗೆ ತರುತ್ತೀರಿ ಇಲ್ಲದಿಹೋದರೆ ಈ ತುಕೋಳ್ ವೇತನದ ಆಯೋಗದ ವರದಿಯನ್ನು ಕೈಬಿಡುವ ಪ್ರಶ್ನೆ ಬರಬಹುದೇ ?

Sri RAMAKRISHNA HEGDE.—It is an hypothetical question.

ಶ್ರೀ ಶರಣಗೌಡ ಇನಾಂದಾರ್.—ಸ್ವಾಮಿ, ಪ್ರಶ್ನೆ 140 (322) (ಅ) ಗೆ ಉತ್ತರವಾಗಿ ವೇತನಾ ಆಯೋಗದವರು ಮಾಡಿರುವ ಶಿಫಾರಸುಗಳ ಮೇರೆಗೆ ಎಷ್ಟು 20 ಎಸ್.ಆರ್.ಪಿ. (1) 1969ನೇ ಕ್ರಮಾಂಕದ 10-3-1969 ನೇ ದಿನಾಂಕದ ಸರ್ಕಾರಿ ಆದೇಶದ ಪ್ರಕಾರ ತುಟ್ಟಿ ಭತ್ಯ, ಮನೆ ಬಾಡಿಗೆ ಭತ್ಯ, ನಗರ ಪರಿಹಾರ ಭತ್ಯಗಳನ್ನು ಈಗಾಗಲೇ ಮುಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಈ ತುಕೋಳ್ ಆಯೋಗವನ್ನು ನೇಮಿಸುವುದಕ್ಕಿಂತ ಮುಂಚೆ ಎನ್.ಜಿ.ಓ. ಗಳು ಏನು ರಪ್ರೆಸೆಂಟೇಷನ್ ಕೊಟ್ಟಿದ್ದರು ? ಅದರಲ್ಲಿ ಕೊಟ್ಟಿದಂಥ ಬೇಡಿಕೆ ಏನು ? ಈಗ ಹೊಸದಾಗಿ ಇಟ್ಟಿರುವ ಬೇಡಿಕೆಗಳು ಏನು ? ಇದರಲ್ಲಿ ವ್ಯತ್ಯಾಸ ಏನು ಇದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ವಿಷಯದಲ್ಲಿ ಈಗಲೇ ಏನೂ ಹೇಳಲಾರೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ವರದಿಯಲ್ಲಿ ತಿಳಿಸಿದ್ದೀರಿ. ಟ್ಯಾಕ್ಸಸ್ ಅಂಡ್ ರಿಸೋರ್ಸಸ್ ಕಮಿಟಿಯವರು ಕೊಟ್ಟ ವರದಿಯಮೇಲೆ ಹಾಗೂ ಐದನೆಯ ವಿತ್ತೀಯ ಆಯೋಗದವರಿಗೆ ಈಗ ಏನು ಒಂದು ವರದಿಯನ್ನು ಒಪ್ಪಿಸಿದ್ದೀರೋ ಅದರ ಆಧಾರದ ಮೇಲೆ, ನಮ್ಮ ರಾಜ್ಯದ ಸಂಪನ್ಮೂಲಗಳ ಆಧಾರ ಏನು ಇದೆಯೋ ಅದರ ಆಧಾರದ ಮೇಲೆ ಈ ತುಕೋಳ್ ವೇತನಾ ಆಯೋಗದ ಕಮಿಟಿಯ ವರದಿಯನ್ನು ಅವಲಂಬಿಸಿರುತ್ತದೆ ಎಂದು. ಈ ದೃಷ್ಟಿಯಿಂದ ನಾನು ಹೇಳುವುದು ಐದನೇ ಆರ್ಥಿಕ ಆಯೋಗದವರು ಈಗಾಗಲೇ 18 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಖೋತಾ ಹಾಕಿದ್ದಾರೆ. ಆದುದರಿಂದ ಆ ಹಣ ಬರದೇ ಹೋದರೆ ಈ ಆಯೋಗದ ವರದಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ತಿಳಿದುಕೊಳ್ಳಬಹುದೇ ? ಎರಡನೆಯದಾಗಿ ತಾವು ತಿಳಿಸಿದಿರಿ ಡೆಮಾಕ್ರಟಿಕ್ ಸೆಟ್ ಅಪ್‌ನಲ್ಲಿ ಯಾವ ಸರ್ಕಾರ ರನ್ ಮಾಡುತ್ತದೋ ಅದು ಆ ಒಂದು ಪಕ್ಷದ ತೀರ್ಮಾನವನ್ನು ಒಪ್ಪಬೇಕು ಎಂದು. ಹಾಗಾದರೆ ಕಾಂಗ್ರೆಸ್ ಪಕ್ಷ ಈ ಒಂದು ಆಯೋಗದ ತೀರ್ಮಾನವನ್ನು ಒಪ್ಪಿದ್ದಾರೆಯೇ ಅಥವಾ ವಿರೋಧ ಮಾಡಿದ್ದಾರೆಯೇ ? ಅದು ಹೇಗಾದರೂ ಇರಲಿ ತಾವು ಈ ಆಯೋಗದ ತೀರ್ಮಾನವನ್ನು ಒಪ್ಪಿಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ 18 ಕೋಟಿ ರೂಪಾಯಿ ಖೋತಾ ಏನು ಇದೆಯೋ ಅದು ಸಿಕ್ಕಿದರೆ ಏನು ಮಾಡುತ್ತೀರಿ, ಸಿಕ್ಕದೆ ಹೋದರೆ ಏನು ಮಾಡುತ್ತೀರಿ ಎನ್ನುವ ಬಗ್ಗೆ ಈಗಲೇ ಉತ್ತರ ಹೇಳಲು ಆಗುವುದಿಲ್ಲ. ಎರಡನೆಯದಾಗಿ ಕಾಂಗ್ರೆಸ್ಸಿನ ಪಕ್ಷದ ತೀರ್ಮಾನ ಏನಾದರೂ ಇದ್ದರೆ ಆ ಕಾರ್ಯಕಲಾಪಗಳಿಗೂ, ಈ ಹೌಸ್‌ನ ಕಾರ್ಯಕಲಾಪಗಳಿಗೂ ಸಂಬಂಧವಿಲ್ಲ. ಕಾಂಗ್ರೆಸ್ಸಿನ ಪಕ್ಷ ಏನು ತೀರ್ಮಾನ ಮಾಡಿಕೊಂಡರೂ ಈ ಹೌಸ್‌ಗೆ ನಾನು ಜವಾಬ್ದಾರ.

ಶ್ರೀ ನದಾಶಿವಪ್ಪ ಪಾಟೀರ್.—ತುಕೋಳ್ ಆಯೋಗದವರು ಮಂತ್ರಿಗಳ ಸಂಖ್ಯೆಯನ್ನು ಕಡಮೆ ಮಾಡುವುದರ ಬಗ್ಗೆಯಾಗಲೀ, ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ತೆಗೆದು ಹಾಕುವುದರ ಬಗ್ಗೆಯಾಗಲೀ ಏನಾದರೂ ಸಿಫಾರಸು ಮಾಡಿದ್ದಾರೆಯೇ ? ಹಾಗೆ ಸಿಫಾರಸು ಮಾಡಿದ್ದ ಪಕ್ಷದಲ್ಲಿ ಅದರ ಬಗ್ಗೆ ಯಾವ ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಮಾಡಿರುವ ಸಿಫಾರಸು ಕಾಪಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ. ಅವರ ಕಕ್ಷೆಯಲ್ಲಿ ಯಾವ ಯಾವ ವಿಚಾರಗಳಿದ್ದುವು ಅವುಗಳ ಬಗ್ಗೆ ಸಿಫಾರಸು ಮಾಡಿದ್ದಾರೆ. ಮಂತ್ರಿ ಮಂಡಲದ ವಿಚಾರ ಅವರ ಕಕ್ಷೆಯೊಳಗೆ ಪುಣ್ಯದಿಂದ ಬರಲಿಲ್ಲ. ಎರಡನೆಯದು ಆಡಳಿತಕ್ಕೆ ಸಂಬಂಧಪಟ್ಟಂಥ ಭಾಗವೇನಿವೆ ವರದಿಯಲ್ಲಿ ಅದನ್ನು ಸರ್ಕಾರ ಇನ್ನೂ ಪರಿಶೀಲಿಸುತ್ತಿದೆ. ಡಿವಿಜನಲ್ ಕಮಿಷನರ್ ಹುದ್ದೆಯನ್ನು ಖೋತಾ ಮಾಡಬೇಕು ಎಂದು ಸೂಚಿಸಿದ್ದಾರೆ. ಇದರ ಬಗ್ಗೆ ಭಿನ್ನಾಭಿಪ್ರಾಯವಿರತಕ್ಕುದು ಸಾಧ್ಯ. ಇದಲ್ಲದೆ ಕೆಲವು ಬೇರೆ

(ಶ್ರೀ ರಾಮಕೃಷ್ಣ ಹೆಗಡೆ)

ಬೇರೆ ಇಲಾಖೆಗಳಲ್ಲಿ, ಉದಾಹರಣೆಗೆ ಪ್ಲಾನಿಂಗ್ ಇಲಾಖೆಯಲ್ಲಿ ಪ್ಲಾನಿಂಗ್ ಸೆಕ್ಶಿಯರಿ ಬೇಡ, ಹಣಕಾಸಿನ ಇಲಾಖೆಗೇ ಆ ಕೆಲಸವನ್ನು ಮಹಿಸಬೇಕು ಎನ್ನುವ ನಿಶ್ಚಾರಸು ಇದೆ. ಇದರ ಬಗ್ಗೆ ಕೂಡ ಭಿನ್ನಾಭಿಪ್ರಾಯವಿರುವುದು ಸಾಧ್ಯ. ಒಂದು ದೃಷ್ಟಿಯಿಂದ ಪ್ಲಾನಿಂಗ್ ಮತ್ತು ಫೈನಾನ್ಸ್ ಒಟ್ಟಿಗೆ ಹೋಗುವುದಾದರೂ ಫೈನಾನ್ಸ್ ಕೆಳಗೆ ಪ್ಲಾನಿಂಗ್ ಬಂದರೆ, ಪ್ಲಾನಿಂಗಿಗೆ ಲಿಮಿಟೆಡ್ ವಿಷನ್ ಆಗುತ್ತದೆ. ಅದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ತೀರ್ಮಾನ ತಗೆದುಕೊಳ್ಳಬೇಕಾಗುತ್ತದೆ.

Sri A. R. BADRINARAYAN.—What is the commitment to the Government in respect of the salaries and allowances of the Government officials if the Tukol Commission Report is given effect to ?

Sri RAMAKRISHNA HEGDE.—I have already answered this question.

ಶ್ರೀ ಮಹದೇವ್ ಜಿ. ಬಣಕಾರ್.—ಐದನೆಯ ಆರ್ಥಿಕ ಆಯೋಗಕ್ಕೆ ಸರ್ಕಾರ ಬೇಡಿಕೆಯನ್ನು ನಲ್ಲಿಸಿದಾಗ, ತುಕೋಳ್ ಆಯೋಗದ ವರದಿಯನ್ನು ಕಾರ್ಯಗತ ಮಾಡಿದರೆ ಬರಬಹುದಾದ ಖರ್ಚನ್ನೂ ಸೇರಿಸಿ ಒಟ್ಟು ಇಷ್ಟು ಹಣ ಬೇಕು ಎಂದು ಆಯೋಗದವರಿಗೆ ತಿಳಿಸಿದ್ದೀರಾ ? ತಿಳಿಸದೆ ಇದ್ದರೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಬಹಳ ಸ್ಪಷ್ಟವಾಗಿ ತಿಳಿಸಿದ್ದೇವೆ.

P. W. D. Roads in Coorg District pending repairs

140. Sri N. LOKAYYA NAIK (Virajpet).—

Will the Minister for Public Works be pleased to state :—

number of roads taken over by the Public Works Department in Coorg District, pending repairs, for more than five years and two years ?

Sri BASAVARAJ MAGAVI (Deputy Minister for Public Works).—

There are no such roads ; repairs have been effected to all the roads to the extent funds are available.

ಶ್ರೀ ಎನ್. ಲೋಕಯ್ಯ ನಾಯಕ್.—ಹತ್ತು ಮೈಲಿ ಇರುವ ರಸ್ತೆಯಲ್ಲಿ ಒಂದು ಮೈಲಿ ದುರಸ್ತಿ ಮಾಡಿದರೆ ದುರಸ್ತಿ ಮಾಡಿದಹಾಗಾಯಿತೇ ?

† ಶ್ರೀ ಬಸವರಾಜ ಮಾಗಾವಿ.—ಹಣದ ಅನುಕೂಲ ನೋಡಿಕೊಂಡು ಕೆಲಸ ಮಾಡಲಾಗಿದೆ. ಪ್ರತಿಯೊಂದು ರಸ್ತೆಗೂ 3 ವರ್ಷಗಳಿಂದ ಮಾಡಿರುವ ರಿಪೇರಿ ಬಗ್ಗೆ ಒಂದು ದೊಡ್ಡ ಸ್ಟೇಟ್‌ಮೆಂಟ್ ನನ್ನ ಬಳಿ ಇದೆ. ಅಧ್ಯಕ್ಷರು ಅನುಮತಿ ಕೊಟ್ಟರೆ ಅದನ್ನು ಸಭೆಯ ಟೇಬರ್‌ಮೇಲೆ ಇಡುತ್ತೇನೆ.

Mr. SPEAKER.—The Hon. Minister may place the statement on the Table of the House.